ಪರತ್ತು.—ಮೈಸೂರ್ ಗೆಜೆಟ್, 1895ನೇ ಏಪ್ರಿಲ್ 25ನೇ ಮುರ್ತು ಮಿನಲ್ಲಿ ಚವುಬೀನೆ ಮತ್ತು ಪೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1895ನೇ ಇಸವಿ ಮಾರ್ಚ್ 15ನೇ ಮುರ್ತು ಂ 15229—ಆರ್. ಎಫ್. 156—92ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ ಮೇರೆ.

ತಾರೀಖು 13—14ನೇ ಏಪ್ರಿಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂದಲ್ ಫೋರಿಯಲ್ಲಿ ಪರತ್ತಕ್ಕ ಬಿಳಿ ಜಕ್ಕೆಯು 1896ನೇ ಇಸವಿ ಏಪ್ರಿಲ್ 20ನೇ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆ ದಂತ ಮೈಸೂರ ಗೆಜೆಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟಿರುವದು ದು ಸರಿಯಷ್ಟೆ. ಸದರೀ ತಾರೀಖು ಪಬ್ಲಿಕ್ ರಜಾ ದಿವಸ ಆದ್ದರಿಂದ ಮೇಲೆ ನಮೂದಿಸಿರತಕ್ಕ ಸಂದಲ್ ಬಿಳಿ ಜಕ್ಕೆಯು ಬರುವ ಮೇ ತಿಂಗಳ 11ನೇ ತಾರೀಖಿನ ದಿವಸ ಹರಾಜು ಮಾಡಿಸಲ್ಪಡುತ್ತೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 6ನೇ ಏಪ್ರಿಲ್ ಸನ್ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮಾಧ್ವಹಳ್ಳಿ ಫಾಟೆಯಲ್ಲಿ ಟೋಲ್‌ಗೇಟೆಂಬ ಸುಂಕದ ಕಟ್ಟೆಯ ಒಳಗೆ ಸನ್ 1896ನೇ ಇಸವಿ ಜುಲೈ ಮಾಹೆ 1ನೇ ಮುರ್ತು ಂ ಲಾಗಾಯಿತು ಸನ್ 1897ನೇ ಜೂನ್ 30ರ ವರಿಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಸನ್ 1896ನೇ ಇಸವಿ ಮೇ ತಾರೀಖು 4ನೇ ಸೋಮವಾರ ಹಗಲು 11 ಘಂಟೆಗೆ ಸಕಲೇಶಪುರದ ಪೊಕ್ಕಾಂನಲ್ಲಿ ತಾಲ್ಲೂಕು ಕಛೇರೀ ಬಿಳಿ ಅವಲ್ದಾರ್‌ರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಛಡಸವಾಲನ್ನಾಗಲಿ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೇ ಅಂಗೀಕರಿಸುವ ಯಾ ತಿರಸ್ಕರಿಸುವ ಅಧಿಕಾರವನ್ನು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ. ಮತ್ತು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರಾದ ಹೊರ್ತು ಹರಾಜು ಖಾಯಂ ಆದ ಹಾಗೆ ತಿಳಿಯಕೂಡದು.

3. ಛಡದರಖಾಸ್ತುದಾರನು ಹರಾಜು ಮೊಬಲಗಿನ ಪೈಕಿ ನಾಲ್ಕರಲ್ಲಿ ಬಂದು ಭಾಗವನ್ನು ಆ ಕೂಡಲೆ ಡಿಪಾಜಿಟ್ ಇಡಬೇಕಲ್ಲದೆ ಬಾಕಿ ಉಳಿದ ಮೊಬಲಗನ್ನು ಸನ್ 1896ನೇ ಇಸವಿ ಜುಲೈ 20ರ ಲಾಗಾಯಿತು ಸಮವಾದ 3 ಖಿಸ್ತು ಗಳಾಗಿ ಪ್ರತಿ ಮಾಹೆ 20ನೇ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿ ಇರಬೇಕು. ಹರಾಜು ಮುಂಜಾರಾತಿಯು ತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯಿತು 15 ದಿವಸಗಳ ಒಳಗೆ ಕ್ರಯವಾದ ಮುಚ್ಚಳಿಕೆ ಬರದುಕೊಡಬೇಕಲ್ಲದೆ ಈ ಕೆಳಗೆ ನಮೂದಿಸುವ ಪರತ್ತಿಗೆ ಒಳಪಟ್ಟು ಕಂಟ್ರಾಕ್ಟಿನಂತೆ ತಾನು ನಡದುಕೊಳ್ಳತಕ್ಕ ಬಗ್ಗೆ ಖಾತರಿ ಜಾಮೀನ್ ಕೊಡಬೇಕು. ಡಿಪಾಜಿಟ್ ಮೊಬಲಗು ಹಾಜರ್ಮಾಡದೇಯೂ ಮುಚ್ಚಳಿಕೆ ಬರದುಕೊಡದೇಯೂ ಜಾಮೀನ್ ಕೊಡದೇಯೂ ತಪ್ಪಿದರೆ ಬಾಬನ್ನು ದುಸರೆ ಹರಾಜ್ ಮೂಲಕ ವಿಕ್ರಯಿಸುವದಲ್ಲದೆ ನಷ್ಟಕ್ಕೆ ತಪ್ಪಿತಸ್ಥನಾದ ಇಜಾರದಾರನನ್ನು ಗುರಿಪಡಿಸುತ್ತಿಯೇ ತಿವಾಯಿ ಹಾಂಗೆ ಬಾಬನ್ನ ದುಸರೆ ಹರಾಜ್ ಮಾಡೋದರಲ್ಲಿ ಉಂಟಾಗುವ ಆದಾಯಕ್ಕೆ ಅವನು ಭಾಗಿಯಾಗಲಾರನು.

4. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಂಗೆ ಬಾಕಿ ಆದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿ 1ಕ್ಕೆ ಒಂದು ಪೈನಂತೆ ಬಡ್ಡಿ ಕೇರಿಸಿ ವಸೂಲ್ಮಾಡಲ್ಪಡುತ್ತೆ. ಮತ್ತು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರಿಗೆ ಯುಕ್ತ ತೋರಿದರೆ ಅಥವಾ ಜಾಮೀರ್ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟು ದುಸರೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು. ಅದರಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟುದಾರನಿಂದಲೇ ಆಗಲಿ ಅಥವಾ ಜಾಮೀರ್ದಾರನಿಂದಲೇ ಆಗಲಿ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜ್ ಮೊಬಲಗು ತಿವಾಯಿ 3—4ನೇ ಕಲಂಗಳಲ್ಲಿ ನಮೂದಾಗುವ ಪರತ್ತುಗಳಿಗೆ ಒಳಪಟ್ಟು ಖಿಜಾನೆಗೆ ಸಲುಯಿಸುವ ಸಕರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಬಂದಾಣೆಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಇಜಾರದಾರನು ಬದ್ಧನಾಗಿರಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿರುವ ಷೆಡ್ಯೂಲ್‌ನಲ್ಲಿ ನಮೂದಿರುವ ದರಗಳ ಮೇರ್ಗೇನೇ ಟೋಲ್ ವಸೂಲ್ಮಾಡಬೇಕು ಮತ್ತು ಸನ್ 1876ನೇ ಇಸವಿ ನವೆಂಬರ್ 4ನೇ ಮುರ್ತು ಂ 274ನೇ ನಂಬರ್ ಲೇಟ್ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಫಾಯಿಷಾಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

7. ಪ್ರತಿ ದಿನದ ಟೋಲ್‌ಯಾನೆ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರ್‌ವಾಕ್ಯವಾದ ಲೆಖ್ಖವನ್ನು ಇಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಅಧಿಕಾರಿಗಳ ತನಿಖೆಗೆ ಸದರೀ ಲೆಖ್ಖವು ಒಳಪಟ್ಟು ಇರತಕ್ಕದ್ದು.

8. 7ನೇ ಪರತ್ತಿನಲ್ಲಿ ನಮೂದಿಸಿರುವ ಮೇರೆ ಕರಾರ್‌ವಾಕಾ ಆಮದ್ ರಫ್ತ್ ಲೆಖ್ಖವನ್ನು ಇಡಲೋಸ್ಕರ ತಿಬ್ಬಂದಿ ಅಂದರೆ ಬಬ್ಬ ಮುತ್ಸದ್ದಿಯ ಖರ್ಚನ್ನು ಕಂಟ್ರಾಕ್ಟುದಾರನೇ ವಹಿಸಬೇಕು.

9. ಗವರ್ನಮೆಂಟ್ ಟೋಲ್‌ಮನೆ ಮತ್ತು ಟೋಲ್‌ಗೇಟನ್ನು ಸಹ ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು. ಮತ್ತು ಆ ವುಗಳನ್ನು ಪೂರಾ ದುರಸ್ತಿನಲ್ಲಿ ಆತನು ಇಟ್ಟುಕೊಂಡಿರತಕ್ಕದ್ದು.

10. ಕಂಟ್ರಾಕ್ಟುದಾರನು ಪ್ರತಿ ಮಾಹೆ ಗುರ್ರೆ ತಾರೀಖಿನಲ್ಲಿ ಹಿಂದಲ ತಿಂಗಳ ಟೋಲ್ ವಸೂಲಿ ಲೆಖ್ಖವನ್ನು ಮಂಜರಾಬಾದ್ ತಾಲ್ಲೂಕು ಕಛೇರಿಗೆ ಕಳುಹಿಸತಕ್ಕದ್ದು.

3H1

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಪ್ಪೀಲು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿ ಇದೆ.

1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಡಿಟೋ ಎರಡು ಡಿಟೋ	1	0	0
3	ಪ್ರತಿ ಯಕ್ಕಾ ಮೇಲೂ	0	4	0
4	ಸ್ಪ್ರಿಂಗ್ಯಾನೆ ಬಿಲ್ಲಿನ ಮೇಲೆ ಇರುವ ಬಾಡಿಗೆ ಭಂಡಿ ಪ್ರತಿ ಬಂದಕ್ಕೆ	0	2	0
5	ಎಂಟು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟೂಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಪ್ರತಿ ಗಾಡಿ ವ ಬಾಡಿಗೆ ಭಂಡಿ ಬಂದಕ್ಕೆ	1	8	0
6	ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	12	0
8	ಆರು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳು ವಗೈರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಆಗಿದ್ದರೆ	0	8	0
10	ಡಿಟೋ ಡಿಟೋ ಭರ್ತಿಇಲ್ಲದಿದ್ದರೆ	0	4	0
11	ಎರಡು ಎತ್ತುಗಳಿಂದ, ಕೋಣಗಳಿಂದ, ಕುದರೆಗಳಿಂದ, ಟೂಕಣಗಳಿಂದ, ಕತ್ತೆಗಳಿಂದ, ಹೇಸರು ಕತ್ತೆಗಳಿಂದ ಎಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ	0	4	0
12	ಡಿಟೋ ಭರ್ತಿ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಇದ್ದರೆ	0	1	0
14	ಡಿಟೋ ಹೊರೆ ಇಲ್ಲದಿದ್ದರೆ	0	0	3
15	ಪ್ರತಿ ಆನೆಗೂ	1	8	0
16	ಪ್ರತಿ ಒಂಟೆಗೂ ಹೊರಿಸಲ್ಪಟ್ಟಿದ್ದರೆ	0	8	0
17	ಡಿಟೋ ಹೊರೆ ಇಲ್ಲದಿದ್ದರೆ	0	4	0
18	ಪ್ರತಿ ಕುದರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	1	6
19	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ 1 ಕುದರೆಗೂ	0	0	9
20	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	9
21	ಪ್ರತಿ ತಟ್ಟು ಯಾ ಹೇಸರಕತ್ತೆ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ	0	0	6
23	ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24	ಪ್ರತಿ ಕುರಿ, ಮೇಕೆ ಯಾ ಸಂದಿ	0	0	1
25	ಎಂಟು ಜೋಯಿಗಳ ವರೆಗೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ	1	0	0
26	ಆರು ಜೋಯಿಗಳೊಡನೆ ಡಿಟೋ	0	12	0
27	ನಾಲ್ಕು ಜೋಯಿಗಳೊಡನೆ ಡಿಟೋ	0	8	0
28	ಇಬ್ಬರು ಜೋಯಿಗಳೊಡನೆ ಡಿಟೋ	0	4	0

ನಡದು ಬರುವ ಮಾರ್ಗಸ್ತರ ಮೇಲೆ ಟೋಲ್ ವಸೂಲ್ ಮಾಡಕ್ಕೆ ದ್ದಲ್ಲ.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇನ್ಸಿ ಹೂರ್‌ನಾಮೆ.

1896ನೇ ಇಸವಿ ಏಪ್ರಿಲ್ 1ನೇ ಮಟ್ಟಿಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟು ತಾಲ್ಲೂಕುಗಳ ಬಗನೆ ಕೇಂದಿ ಪೈಕಾರ್ ಮತ್ತು ಮೂರುವ ಹಕ್ಕು : ಸ್ಯ 1896ನೇ ಜುಲೈ ಗುರೈ ಲಾಗಾಯತು 1897ನೇ ಜೂ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯಕ್ಕೇನ ಆಗಲಿ ಆಯಾ ತಾಲ್ಲೂಕು ಬಾಜಾಪಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ವಳಪಟ್ಟು ಆಯಾ ತಾಲ್ಲೂಕು ಕಛೇರಿ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ವಬ್ಬರು ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಲೇವಾರಿಯಿಸಲ್ಪಡುತ್ತದೆ.

ಕ್ರ	ತಾಲ್ಲೂಕು	ಹರಾಜು ತಾರೀಖು	
1	ಶಿಕಾರಿಪುರ	ಸ್ಯ 1896ನೇ ಮೇ	11—12
2	ಸೊರಬ	ಡಿಟೋ	14—15
3	ಸಾಗರ	ಡಿಟೋ	18—19
4	ನಗರ	ಡಿಟೋ	21—22
5	ತೀರ್ಥಹಳ್ಳಿ	ಡಿಟೋ	25—26

II. ಪ್ರತಿ ಬಂದು ಸರಕಕ್ಕೆ ಗುತ್ತಿಯನ್ನು ಚಕಡದರಖಾಸ್ತು ದಾರನಿಗೆ ಕೊಡಲ್ಪಡುವದು, (ಸದರೀ ಚಕಡದರಖಾಸ್ತು ಸ್ವಾಧ್ಯವಾದ ವಟ್ಟಿಗೂ ಕಳೆದ ಸಾಲಿಗಳ ಮೊಬಲಗ್ಯೆಕಮ್ಮಿ ಇರಕೂಡದು) ಈ ಹರಾಜು ಅಸಿಸ್ಟೆಂಟ್ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು